





# ಸೋದರಿ ನಿವೇದಿತಾ ಭಾಗ ೩

ಕಥೆ: ದೇವಪ್ರಸಾದ ಭಟ್ಟಾಚಾರ್ಯ ಅನುವಾದ: ಉಷಾ ಎಸ್. ಮೂರ್ತಿ ಚಿತ್ರ: ಸುನಿತಾ ವಾಸು




ಸ್ವಾಮೀಜಿಯವರ ಈ ಕಾರ್ಯಯೋಜನೆಯ ವಿವರಗಳನ್ನು ತಿಳಿಯಲು ಅವಳು ಅವರಿಗೆ ಪತ್ರವನ್ನು ಬರೆದಳು.
ಸ್ವಾಮೀಜಿ ಅದಕ್ಕೆ ತಕ್ಷಣ ಉತ್ತರಿಸಿದರು.
ಅವರು ತಮ್ಮ ಜೀವನದ ಧ್ಯೇಯವನ್ನು ವಿವರಿಸಿದರು ಮತ್ತು ನೊಂದವರ, ಬಡವರ ಸೇವೆ ಮಾಡುವ ಮನಸ್ಸುಳ್ಳ ನಿಃಸ್ವಾರ್ಥ ಯುವಕ ಯುವತಿಯರನ್ನು ಈ ಕಾರ್ಯಕ್ಕೆ ಆಹ್ವಾನಿಸಿದರು.
ನನಗೆಷ್ಟು ಆನಂದವಾಗುತ್ತಿದೆ! ಸ್ವಾಮೀಜಿ ನನ್ನ ಮಾತುಗಳನ್ನು ಪರಿಗಣಿಸಿದ್ದಾರೆ.
ಭಾರತಕ್ಕೆ ಬರಬೇಕೆಂಬ ಅವಳ ತವಕ ದಿನೇ ದಿನೇ ಹೆಚ್ಚುತ್ತಿತ್ತು. ಸ್ವಾಮೀಜಿಯವರ ಆದೇಶವನ್ನು ಅವಳು ಎದುರುನೋಡುತ್ತಿದ್ದಳು.
ಕೊನೆಗೂ ಅವರು ಅವಳನ್ನು ಸ್ವಾಗತಿಸಿದರು. ಅವರು ಎದುರಿಸಬೇಕಾಗಿ ಬರಬಹುದಾದ ಕಠಿಣ ಸವಾಲುಗಳನ್ನು ಕುರಿತು ತಿಳಿಸಿದರು.


ಹಲವಾರು ಅಡೆತಡೆಗಳು ಬರಬಹುದು.
ಅಲ್ಲಿ ವರ್ಷದ ಅನೇಕ ದಿನಗಳಲ್ಲಿ ಉಷ್ಣ ವಾತಾವರಣ ಇರುವುದು. ಇಂಗ್ಲೆಂಡಿನಲ್ಲಿರುವ ಯಾವ ಅನುಕೂಲತೆಗಳೂ ಇರುವುದಿಲ್ಲ. ಕಷ್ಟಕಾರ್ಪಣ್ಯಗಳಿಂದ ಬದುಕುತ್ತಿರುವ ಬಡಜನರ ಮಧ್ಯೆ ಬದುಕಬೇಕಾಗಿ ಬರಬಹುದು.
ಮಾರ್ಗರೆಟ್ 1898ರ ಜನವರಿ 28ರಂದು ಕೊಲ್ಕತ್ತೆಗೆ ಬಂದಿಳಿದಳು. ಸ್ವಾಮೀಜಿ ಅವಳನ್ನು ಹಡಗಿನ ಡೆಕ್ಕಿನಲ್ಲಿ ಸ್ವಾಗತಿಸಿದರು.
ಅವಳನ್ನು ಪಾರ್ಕ್‌ಸ್ಟ್ರೀಟ್‌ನಲ್ಲಿನ ಒಂದು ಬಂಗಲೆಗೆ ಕರೆದೊಯ್ದರು.
ಆಕೆ ಮೊದಲ ಕೆಲವು ದಿನಗಳನ್ನು ಈಡನ್ ಗಾರ್ಡನ್, ಬೊಟಾನಿಕಲ್ ಗಾರ್ಡನ್, ಮ್ಯೂಸಿಯಂ, ಕೋಟೆ ಇವುಗಳನ್ನು ನೋಡುವುದರಲ್ಲೇ ಕಳೆದಳು.
ಭಾನುವಾರಗಳಂದು ಚರ್ಚ್‌ನಲ್ಲಿನ ಪ್ರಾರ್ಥನೆಗಳಲ್ಲಿ ಭಾಗವಹಿಸಿದಳು.


ಸ್ವಾಮೀಜಿ ಅವಳಿಗೆ ಬಂಗಾಳೀ ಭಾಷೆಯನ್ನು ಕಲಿಸಲು ಶಿಕ್ಷಕರನ್ನು ನೇಮಿಸಿದರು.
ಮಾರ್ಗರೆಟ್ ಸ್ವಾಮೀಜಿಯವರ ವಿಚಾರಗಳನ್ನು ಸರಿಯಾಗಿ ಅರ್ಥಮಾಡಿಕೊಂಡಳು.
ಮಾರ್ಗರೆಟ್ ಉತ್ತಮ ಭಾಷಣಕಾರಳು. ಸ್ಟಾರ್ ಥಿಯೇಟರ್‌ನಲ್ಲಿ ನಡೆದ 'ರಾಮಕೃಷ್ಣ ಮಿಷನ್'ನ ಪ್ರಾರಂಭೋತ್ಸವದ ಸಭೆಯಲ್ಲಿ ಅವಳು ತನ್ನ ಮೊದಲನೆಯ ಭಾಷಣ ಮಾಡಿದಳು.
ಒಂದು ದಿನ ಮಾರ್ಗರೆಟ್ ಇತರ ಪಾಶ್ಚಾತ್ಯ ಮಹಿಳೆಯರೊಡನೆ ಶ್ರೀಮಾತೆ ಶ್ರೀಶಾರದಾದೇವಿಯವರನ್ನು ಭೇಟಿ ಮಾಡಲು ಹೋದಳು.
ಶ್ರೀಮಾತೆಯವರು ಅವರೆಲ್ಲರನ್ನೂ ತಮ್ಮ ಮಕ್ಕಳೇ ಎಂಬಂತೆ ಪ್ರೀತಿಯಿಂದ ಸ್ವಾಗತಿಸಿದರು.
ಒಬ್ಬರಿಗೊಬ್ಬರ ಭಾಷೆ ಅರ್ಥವಾಗದಿದ್ದರೂ, ಅದರಿಂದ ಸಮಸ್ಯೆಯೇನೂ ಆಗಲಿಲ್ಲ.
ಶ್ರೀಮಾತೆಯವರು ಅವರೊಡನೆ ಊಟ ಮಾಡಿದರು.
ಮುಂದಿನ ಸಂಚಿಕೆಗೆ..